


ಫರ್ಝಾನಾಗೆ ನಾಚಿಕೆಯೆನಿಸಿತು. ಅವರನ್ನು ತಡೆಯುತ್ತಾ "ಬೇಡ, ಬೇಡ, ನೀವು ಅಷ್ಟು ದೂರದಿಂದ ಬರೋದು ಬೇಡ. ನಿಮ್ಮ ಡ್ರೈವರೂ ಇಲ್ಲ" ಅಂದಳು.

"ಅದೇನೂ ದೊಡ್ಡ ಸಮಸ್ಯೆಯಲ್ಲ. ಆದರೆ, ನಮ್ಮ ಕಂಪನಿಲಿ ಇವತ್ತೇ ಮೀಟಿಂಗ್ ಇದೆ. ಆರುಗಂಟೆವರೆಗೆ. ಇಲ್ಲದೆ ಇದ್ರೆ..."

"ಪರವಾಗಿಲ್ಲ ಬಿಡಿ, ಅವರು ಬಾಂಬೆಯಿಂದ ಬಂದ ಮೇಲೆ ನಾವು ಬರ್ತೀವಿ. ಈಗ ಬಂದ್ರೆ ತುಂಬಾ ಜನರ ಮಧ್ಯೆ ಸರಿಯಾಗಿ ಮಾತಾಡೋಕೂ ಆಗಲ್ಲ."

"ಹೌದು, ಅದೂ ಸರೀನೆ. ಒಂದಿನ ಸಂಜೆಯೊತ್ತಿಗೆ ಬನ್ನಿ, ಮಕ್ಕಳು ಒಟ್ಟಿಗೆ ಆಟ ಆಡ್ಕೋತಾರೆ. ನೀವು ನಮ್ಮಲ್ಲಿಯೇ ರಾತ್ರಿ ಊಟ ಮುಗಿಸಿ ಹೋಗಬಹುದು."

"ಸರಿ, ಹಾಗೇ ಮಾಡೋಣ."

ಫರ್ಝಾನಾ ಮಗಳಿಗೆ ಅರ್ಥವಾಗಬಹುದಾದ ರೀತಿಯಲ್ಲಿ ವಿವರಿಸಿದಳು. ಫರೀನ್ ಮೌನವಾಗಿ ಎಲ್ಲ ಕೇಳಿಸಿಕೊಂಡಳು. ಅವಳ ಮುಖ ನೋಡಿ ಹೇಳೋಕಾಗ್ತಿಲ್ಲ, ಇದು ಅವಳಿಗೆ ಇಷ್ಟವಾಯ್ತೊ ಇಲ್ವೊ ಅಂತ.

ಮಧ್ಯಾಹ್ನ ಅಡುಗೆ ಮನೆ ಕಡೆಯಿಂದ ಹೋಗ್ತಾಯಿದ್ದಾಗ ಇದ್ದಕ್ಕಿದ್ದಂತೆ ಇಬ್ಬರ ಮಾತುಕತೆ ಕೇಳಿಸಿತು. ತಟಕ್ಕನೆ ನಿಂತಳು ಫರ್ಝಾನಾ. ಅಡುಗೆಮನೆಯ ಮಣೆ ಮೇಲೆ ಕೂತ್ಕೊಂಡು ರಹೀಮನ ಅಮ್ಮ ಒಪ್ಪೊತ್ತಿನ ಕೆಲಸಕ್ಕೆ ಬರುವ ಮೊನಿಷಾ ಜೊತೆ ಮಾತಾಡ್ತಾ ಇದ್ದಳು. ಒಬ್ಬಳು ಸೀರೆ ಉಟ್ಟಿದಾಳೆ, ಮತ್ತೊಬ್ಬಳು ನೀಲಿ ಸಲ್ವಾರ್ ಹಾಕಿದ್ದಳು. ಮೊನಿಷಾಗೆ ಬಂಗಾಳಿ ಬರೋದಿಲ್ಲ. ಆದರೆ, ಎರಡು ವರ್ಷದಿಂದ ರಹೀಮನ ಅಮ್ಮನ ಜೊತೆ ಕೆಲಸ ಮಾಡ್ತಾಮಾಡ್ತಾ ಅವಳ ಮಾತು ಅರ್ಥ ಮಾಡಿಕೊಳ್ಳಬಲ್ಲಳು. ಮೊನಿಷಾ ರಹೀಮನ ಅಮ್ಮನಿಗೆ ಹಿಂದಿಯಲ್ಲಿ ಹೇಳುತ್ತಿದ್ದಳು, "ದೀದಿ, ನೀನು ಮುಸಲ್ಮಾನರವಳು, ಹುಷಾರಾಗಿರು. ಸುಮ್ನೆ ಸುಮ್ನೆ ಆಚೆಗೆ ಹೋಗಬೇಡ. ಗಲಾಟೆ ನಡೀತಾ ಇದೆ."

ರಹೀಮನ ಅಮ್ಮ ಹೇಳ್ತಾಯಿದ್ದಳು, "ನೀನೂ ಅಷ್ಟೇ. ಹುಷಾರಾಗಿ ಓಡಾಡು. ಗಲಾಟೆ ಮಧ್ಯೆ ಸಿಕ್ಕೊಂಡರೆ ನಿನ್ನನ್ನೂ ಹೊಡೆದಾಕ್ತಾರೆ."

ಪರ್ಝಾನಾ ಅಲ್ಲಿ ನಿಲ್ಲದೆ ಮುಂದೆ ಹೋದಳು. ಆಶ್ಚರ್ಯ! ಇವರಿಬ್ಬರೂ ದಿನಾ ಕೆಲಸದ ವಿಷಯಕ್ಕೆ ಎಷ್ಟು ಜಗಳ ಕಾಯ್ತಾರೆ. ಆದರೆ, ಇವತ್ತು ಒಬ್ಬರ ಮೇಲೆ ಒಬ್ಬರಿಗೆ ಎಷ್ಟು ಕಾಳಜಿ!

ಸಂಜೆ ಬಾಲ್ಕನಿಯಲ್ಲಿ ನಿಂತ್ಕೊಂಡು ಅನ್ಯಮನಸ್ಕಳಾಗಿ ಹೊರಗೆ ನೋಡುತ್ತಿದ್ದಳು ಫರ್ಝಾನಾ. ಅಷ್ಟೊತ್ತಿಗೆ ದಾಶಗುಪ್ತೊರ ಫೋನ್ ಬಂತು, "ನೀವು ಸ್ವಲ್ಪ ನಮ್ಮನೆಗೆ ಬನ್ನಿ. ನಾನು ಗಾಡಿ ತಗೊಂಡು ಬರ್ತೀನಿ. ರೆಡಿಯಾಗಿರ್ತೀರಾ?"

ಫರ್ಝಾನಾ ವಿಸ್ಮಿತಳಾಗಿ "ಈಗ!?" ಎಂದಳು, "ಫಂಕ್ಷನ್ ಶುರುವಾಗಿದೆ. ಈಗ ಹೇಗೆ ಬರ್ತೀರಿ? ಅದೂ ಅಲ್ಲದೆ ಈಗಷ್ಟೇ ಆಫೀಸಿಂದ ಸುಸ್ತಾಗಿ ಬಂದಿರ್ತೀರಿ."

"ದಯವಿಟ್ಟು ಬನ್ನಿ. ನೀವು ಬರದಿದ್ರೆ ಆಗೋದಿಲ್ಲ."

"ಅಯ್ಯೋ! ಇದೇನು ಹೇಳ್ತೀರಿ?"